**ಜವಾಹರ್‌ಲಾಲ್ ನೆಹರು ತಾರಾಲಯ**

**ಶ್ರೀ. ಟಿ. ಚೌಡಯ್ಯ ರಸ್ತೆ, ಹೈ ಗ್ರೌಂಡ್ಸ್**

**ಬೆಂಗಳೂರು – ೫೬೦ ೦೦೧**

**ದೂರವಾಣಿ: ೦೮೦-೨೨೩೭೯೭೨೫ / ೨೨೨೬೬೦೮೪**

**ಜಾಲತಾಣ: www.taralaya.org  e-mail: info@taralaya.org**

## ವಿಜ್ಞಾನ ರಸ ಪ್ರಶ್ನೆ ಕಾರ್ಯಕ್ರಮದ ವಿವರಗಳು

ಬೆಂಗಳೂರಿನ ಜವಾಹರ್‌ಲಾಲ್ ನೆಹರು ತಾರಾಲಯವು ಸ್ವಾತಂತ್ರ್ಯದ ೭೫ನೇ ವರ್ಷದ ಅಮೃತ ಮಹೋತ್ಸವದ ಅಂಗವಾಗಿ 8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಕನ್ನಡದಲ್ಲಿ ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸುತ್ತಿದೆ. ಇದು ಖಗೋಳ ಮತ್ತು ಬಾಹ್ಯಾಕಾಶ ವಿಜ್ಞಾನಗಳ ಕುರಿತ ರಸಪ್ರಶ್ನೆಯಾಗಿರುತ್ತದೆ.

ಈ ರಸಪ್ರಶ್ನೆಯು ಕೇವಲ ವಿಚಾರಗಳು, ಅಂಕಿ ಅಂಶಗಳು ಹಾಗೂ ಖಗೋಳೀಯ ಘಟನೆಗಳಿಗೆ ಸೀಮಿತವಾಗಿರದೆ ಪರಿಕಲ್ಪನೆಗಳ ತಿಳುವಳಿಕೆ, ವೈಜ್ಞಾನಿಕ ತತ್ವಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸುವುದು ಹಾಗೂ ತತ್ವಗಳನ್ನು ಬಳಸುವುದು - ಇವುಗಳ ಪರೀಕ್ಷೆಯಾಗಿರುತ್ತದೆ ಈ ಪ್ರಶ್ನೆಗಳು ಖಗೋಳ ಶಾಸ್ತ್ರ ಮತ್ತು ಬಾಹ್ಯಾಕಾಶ ವಿಜ್ಞಾನಕ್ಕೆ ಒತ್ತು ನೀಡುವ ಮೂಲಕ ವ್ಯಾಪಕವಾದ ವೈಜ್ಞಾನಿಕ ವಿಷಯಗಳನ್ನು ಒಳಗೊಂಡಿರುತ್ತವೆ.

**ಹಂತ** ೧: ಇದು ಇಡೀ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಬಹು ಆಯ್ಕೆಯ ಪ್ರಶ್ನೆಗಳ ಪರೀಕ್ಷೆ. ಈ ಹಂತದಲ್ಲಿ ಶೇಕಡ ೭೦ ಕ್ಕಿಂತ ಹೆಚ್ಚು ಅಂಕ ಗಳಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಇ-ಪ್ರಶಂಸಾ ಪತ್ರವನ್ನು ನೀಡಲಾಗುವುದು.

**ಹಂತ ೨**: ಕರ್ನಾಟಕದ ನಾಲ್ಕು ವಿಭಾಗಗಳಾದ ಬೆಂಗಳೂರು, ಬೆಳಗಾವಿ, ಕಲ್ಬುರ್ಗಿ ಮತ್ತು ಮೈಸೂರು, ಇವುಗಳಿಂದ, ಮೊದಲ ಹಂತದಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ ಮೊದಲ ನೂರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆಯಾದ ಎಲ್ಲಾ ೧೦೦ ವಿದ್ಯಾರ್ಥಿಗಳಿಗೆ ಬಹುಮಾನದ ಜೊತೆಗೆ ಪ್ರಶಂಸಾ ಪತ್ರವನ್ನು ನೀಡಲಾಗುವುದು.

**ಹಂತ ೩:** ಪ್ರತಿ ವಿಭಾಗದಿಂದ ಆಯ್ಕೆಯಾದ ನೂರು ವಿದ್ಯಾರ್ಥಿಗಳು ತಮ್ಮ ತಮ್ಮ ವಿಭಾಗದಲ್ಲಿನ ನಿಗದಿತ ವಿಜ್ಞಾನ ಕೇಂದ್ರದಲ್ಲಿ ಲಿಖಿತ ಪರೀಕ್ಷೆಯಲ್ಲಿ ಭಾಗವಹಿಸುತ್ತಾರೆ. ಲಿಖಿತ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿ ವಿಭಾಗದಿಂದ ಹದಿನಾರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಉಳಿದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಶಂಸಾ ಪತ್ರವನ್ನು ನೀಡಲಾಗುವುದು.

**ಹಂತ ೪**: ಪ್ರತಿ ವಿಭಾಗದಲ್ಲೂ ನಾಲ್ಕನೇ ಹಂತದವರೆಗೆ ಆಯ್ಕೆಯಾದ ೧೬ ವಿದ್ಯಾರ್ಥಿಗಳನ್ನು ೪ ತಂಡಗಳಾಗಿ ವಿಂಗಡಿಸಿ ರಸ ಪ್ರಶ್ನೆ ನಡೆಸಲಾಗುವುದು. ಪ್ರತಿ ತಂಡದಲ್ಲಿ ಮೊದಲು ಬಂದ ನಾಲ್ಕು ವಿದ್ಯಾರ್ಥಿಗಳು ಮುಂದಿನ ಸುತ್ತಿಗೆ ಆಯ್ಕೆಯಾಗುತ್ತಾರೆ.

**ಹಂತ ೫**: ಆಯ್ಕೆಯಾದ ನಾಲ್ಕು ವಿದ್ಯಾರ್ಥಿಗಳಿಗೆ ಪುನ: ರಸಪ್ರಶ್ನೆ ನಡೆಸಿ, ಪ್ರತಿ ವಿಭಾಗದಿಂದ ಒಬ್ಬ ವಿದ್ಯಾರ್ಥಿಯನ್ನು ಆಯ್ಕೆ ಮಾಡಲಾಗುವುದು. ಉಳಿದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಶಂಸಾ ಪತ್ರ ನೀಡಲಾಗುವುದು.

**ಹಂತ ೬:** ನಾಲ್ಕೂ ವಿಭಾಗದಿಂದ ವಿಜೇತರಾದ ವಿದ್ಯಾರ್ಥಿಗಳಿಗೆ ಕೊನೆಯ ಹಂತದ ರಸ ಪ್ರಶ್ನೆಯನ್ನು ಬೆಂಗಳೂರಿನಲ್ಲಿ ನಡೆಸಲಾಗುವುದು. ಇದರಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ ಪ್ರಥಮ, ದ್ವಿತೀಯ ಹಾಗೂ ಎರಡು ತೃತೀಯ ಬಹುಮಾನಗಳನ್ನು ನೀಡಲಾಗುವುದು.

| | | |
|---|---|---|
| ಪ್ರಥಮ ಬಹುಮಾನ | : | ರೂ.೧೦,೦೦೦-೦೦ |
| ದ್ವಿತೀಯ ಬಹುಮಾನ | : | ರೂ.೭,೫೦೦-೦೦ |
| ತೃತೀಯ ಬಹುಮಾನ (ಇಬ್ಬರಿಗೆ) | : | ರೂ.೫,೦೦೦-೦೦ (ತಲಾ) |

ಆಸಕ್ತ ವಿದ್ಯಾರ್ಥಿಗಳು https://forms.gle/MXseSe38u8vu1ndi7 ಈ ಕೊಂಡಿಯನ್ನು ಕ್ಲಿಕ್ ಮಾಡಿ, ಅಲ್ಲಿರುವ ಅರ್ಜಿಯನ್ನು ಭರ್ತಿ ಮಾಡುವ ಮೂಲಕ ಈ ರಸ ಪ್ರಶ್ನೆ ಕಾರ್ಯಕ್ರಮಕ್ಕೆ ಉಚಿತವಾಗಿ ನೋಂದಾಯಿಸಿಕೊಳ್ಳಬಹುದಾಗಿದೆ.

**ನಿಬಂಧನೆಗಳು:**

1. ವಿದ್ಯಾರ್ಥಿಯು ಕರ್ನಾಟಕದಲ್ಲಿ ೨೦೨೨-೨೩ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸ ಮಾಡುತ್ತಿರಬೇಕು.
2. ಪ್ರೌಢಶಾಲಾ ವಿದ್ಯಾರ್ಥಿಯಾಗಿರಬೇಕು.
3. ಪ್ರೌಢಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವ ಬಗ್ಗೆ ದಾಖಲೆಯನ್ನು ಒದಗಿಸಬೇಕು.
4. ರಸಪ್ರಶ್ನೆಯನ್ನು ಕನ್ನಡದಲ್ಲಿ ನಡೆಸಲಾಗುವುದು ಮತ್ತು ವಿದ್ಯಾರ್ಥಿಗಳು ಕನ್ನಡದಲ್ಲಿ, ಓದಲು, ಬರೆಯಲು ಮತ್ತು ಮೌಖಿಕವಾಗಿ ಉತ್ತರಿಸಲು ಸಮರ್ಥರಿರಬೇಕು.
5. ವಿದ್ಯಾರ್ಥಿಗಳು ಇ-ಮೇಲ್ ಖಾತೆಯನ್ನು ಹೊಂದಿರಬೇಕು.
6. **ಸ್ಪರ್ಧೆಗೆ ನೋಂದಾಯಿಸಲು ಕೊನೆಯ ದಿನಾಂಕ ಜೂನ್ 24, 2022.**

7. **ಪರೀಕ್ಷೆ(ಆನ್ಲೈನ್)ಯ ದಿನಾಂಕ ಜುಲೈ 3, 2022 ರಂದು ಬೆಳಿಗ್ಗೆ 11:30.** ಅಣಕು ಪರೀಕ್ಷೆ(ಆನ್ಲೈನ್)ಯನ್ನು ಜೂನ್ 26, 2022 ರಂದು ಬೆಳಿಗ್ಗೆ 11:30 ಕ್ಕೆ ಆಯೋಜಿಸಲಾಗಿದೆ. ಇವುಗಳ ಕೊಂಡಿ ಮತ್ತು ಇತರೆ ವಿವರಗಳನ್ನು ಪ್ರತ್ಯೇಕವಾಗಿ ಅರ್ಜಿದಾರರಿಗೆ ಕಳುಹಿಸಲಾಗುವುದು.
8. ಭಾಗವಹಿಸುವವರ ಕಡೆಯಿಂದ ಉಂಟಾಗುವ ಯಾವುದೇ ತಾಂತ್ರಿಕ ತೊಂದರೆಗಳಿಗೆ ತಾರಾಲಯವು ಜವಾಬ್ದಾರಿಯಲ್ಲ.
9. ಈ ಸ್ಪರ್ಧೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳು/ಮಾರ್ಪಾಟುಗಳ ಅಂತಿಮ ನಿರ್ಧಾರವನ್ನು ಜವಾಹರ್‌ಲಾಲ್ ನೆಹರು ತಾರಾಲಯ ಕಾಯ್ದಿರಿಸಿದೆ.

* * *